This Question Paper consists of 31 questions and 8 printed pages.

| Roll No. ರೋಲ್ ನಂ. | | | | | | | | | | | | | Code No. **52/S/A/K** |
|---|---|---|---|---|---|---|---|---|---|---|---|---|---|

# KANNADA
# (ಕನ್ನಡ)
# (208)

**Set A**

**Day and Date of Examination**
**ಪರೀಕ್ಷೆಯ ದಿನ ಮತ್ತು ತಾರೀಖು** ____________________

**Signature of Invigilators** 1. ____________________

**ಉಸ್ತುವಾರಿದಾರರ ರುಜು**

2. ____________________

**ಸಾಮಾನ್ಯ ಸೂಚನೆಗಳು :**

1. ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯ ಮೊದಲ ಪುಟದಲ್ಲಿ ತಮ್ಮ ರೋಲ್ ನಂಬರ್ ಬರೆಯಬೇಕು.
2. ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಮೊದಲ ಮೇಲ್ಭಾಗದಲ್ಲಿ ಕೊಟ್ಟಿರುವ ಒಟ್ಟು ಪುಟಗಳ ಸಂಖ್ಯೆ ಹಾಗೂ ಒಟ್ಟು ಪ್ರಶ್ನೆಗಳ ಸಂಖ್ಯೆಗೆ ತಕ್ಕಂತೆ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳೂ ಹಾಗೂ ಪ್ರಶ್ನೆಗಳು ಮುದ್ರಿತವಾಗಿದೆಯೇ ಎಂದು ಪರೀಕ್ಷಿಸಿ, ಪ್ರಶ್ನೆಗಳ ಕ್ರಮಸಂಖ್ಯೆ ಸರಿಯಾಗಿದೆಯೇ ಎಂದು ಪರೀಕ್ಷಿಸಿ.
3. ವಸ್ತುನಿಷ್ಠ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಪ್ರಶ್ನೆಯ ಜೊತೆಯಲ್ಲಿ ನೀಡಿರುವ ಉತ್ತರಗಳಿಂದಲೇ ಆರಿಸಿಕೊಳ್ಳಬೇಕು. ನಿಮಗೆ ಕೊಟ್ಟಿರುವ ಬೇರೆ ಉತ್ತರಪತ್ರಿಕೆಯಲ್ಲಿ ಸರಿಯಾದ ಉತ್ತರ ಸಂಖ್ಯೆ **(A), (B), (C), (D)** ಯನ್ನು ಬರೆಯಬೇಕು.
4. ಎಲ್ಲಾ ಪ್ರಶ್ನೆಗಳಿಗೂ ನಿರ್ದಿಷ್ಟ ಸಮಯದಲ್ಲಿಯೇ ಉತ್ತರ ಬರೆಯಬೇಕು. ವಸ್ತುನಿಷ್ಠ ಪ್ರಶ್ನೆಗಳಿಗೆ ಬೇರೆ ಸಮಯವನ್ನು ನೀಡಲಾಗುವುದಿಲ್ಲ.
5. ನಿಮ್ಮ ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ನಿರ್ದಿಷ್ಟ ಜಾಗದಲ್ಲಿ ಮಾತ್ರ ನಿಮ್ಮ ರೋಲ್ ನಂಬರ್ ಬರೆಯಬೇಕು. ಹಾಗಲ್ಲದೇ ಬೇರೆ ಎಲ್ಲಿಯೂ ನಿಮ್ಮ ಗುರುತು ನೀಡಬಹುದಾದ ನಿಮ್ಮ ರೋಲ್ ನಂಬರ್‌ಅನ್ನು ಬರೆಯಕೂಡದು. ಒಂದು ವೇಳೆ ಹಾಗೇನಾದರೂ ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಅನರ್ಹಗೊಳಿಸಲಾಗುವುದು.
6. ನಿಮ್ಮ ಪ್ರಶ್ನೆ ಪತ್ರಿಕೆಯ ಕೋಡ್ ನಂಬರ್ **52/S/A/K-A** ಉತ್ತರ ಪತ್ರಿಕೆಯಲ್ಲಿ ಬರೆಯಿರಿ.

# KANNADA

## (ಕನ್ನಡ)

## (208)

**ಸಮಯ : 3 ಗಂಟೆಗಳು]** **[ಗರಿಷ್ಠ ಅಂಕಗಳು : 100**

**ಸೂಚನೆಗಳು :** (1) **ಎಲ್ಲಾ** ಪ್ರಶ್ನೆಗಳಿಗೆ ಉತ್ತರಗಳನ್ನು ಉತ್ತರ ಪುಸ್ತಕದಲ್ಲೆ ಬರೆಯಿರಿ.
(2) ಪ್ರಶ್ನೆ ಮತ್ತು ಉಪಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆಯಿರಿ.

ಪ್ರಶ್ನೆ **1** ರಿಂದ **11** ರವರೆಗೆ **4** ಆಯ್ಕೆಗಳನ್ನು ಕೊಡಲಾಗಿದೆ. ಅತ್ಯಂತ ಸೂಕ್ತವಾದುದನ್ನು ಆಯ್ಕೆಮಾಡಿ ಉತ್ತರಿಸಿರಿ.

**1.** **'ಮೈಲಿ'** ಈ ರೋಗಕ್ಕೆ ಇರುವ ಇನ್ನೊಂದು ಹೆಸರು __________. **1**
(A) ಚಿಕ್ಕಮ್ಮ (B) ಕಾಲರಾ
(C) ದೊಡ್ಡಮ್ಮ (D) ಮಾರಮ್ಮ

**2.** **'ಕುವೆಂಪು'** ಅವರು ಜನಿಸಿದ ಜಿಲ್ಲೆ ಇದು : **1**
(A) ಮೈಸೂರು (B) ಶಿವಮೊಗ್ಗ
(C) ಬೆಂಗಳೂರು (D) ಉಡುಪಿ

**3.** ಪೂರ್ಣಚಂದ್ರ ತೇಜಸ್ವಿ ಬರೆದ ಕೃತಿ ಇದು : **1**
(A) ಚಿದಂಬರ ರಹಸ್ಯ (B) ಮೈಸೂರು ಮಲ್ಲಿಗೆ
(C) ಭಾರತ ಸಿಂಧು ರಶ್ಮಿ (D) ಏಕಲವ್ಯ

**4.** ರಾಜನ ಮಗನ ಕಿವಿ __________. **1**
(A) ಆನೆ ಕಿವಿ (B) ಕತ್ತೆ ಕಿವಿ
(C) ಎಮ್ಮೆ ಕಿವಿ (D) ಕುದುರೆ ಕಿವಿ

**5.** ನಂಬಿಗೀಲೆ ತುಂಬ್ಯಾದ ನಮ್ಮ __________. **1**
(A) ಕಾಳು (B) ಬಾಳು
(C) ಗೋಳು (D) ಜೋಳು

**6.** ಶಾಲುಸಾಬಿ ಇದರ ವಿಚಾರಗಳನ್ನು ಚೆನ್ನಾಗಿ ಬಲ್ಲವನಾಗಿದ್ದ : **1**
(A) ಖುರಾನ್ (B) ರಾಮಾಯಣ
(C) ಋಗ್ವೇದ (D) ಯಜುರ್ವೇದ

7. ಕ್ಷಯರೋಗಕ್ಕೆ ಎಷ್ಟು ತಿಂಗಳು ಔಷಧಿ ಸೇವಿಸಬೇಕು ? 1

(A) 12 ತಿಂಗಳು (B) 6 ತಿಂಗಳು
(C) 18 ತಿಂಗಳು (D) 4 ತಿಂಗಳು

8. ಬೆಟ್ಟದ ಮೇಲೊಂದು ಮನೆಯ ಮಾಡಿ _________ ಅಂಜಿದಡೆಂತಯ್ಯ. 1

(A) ನೆರೆತೊರೆಗಳಿಗೆ (B) ಶಬ್ದಕ್ಕೆ
(C) ಮೃಗಗಳಿಗೆ (D) ಜನರಿಗೆ

9. ಕಾರಯ್ಯನ ಮಕ್ಕಳೇ ಇವರು _________. 1

(A) ನಗರವಾಸಿಗಳು (B) ಸೋಲಿಗರು
(C) ಬಿಲ್ಲಯ್ಯ (D) ಅರಣ್ಯವಾಸಿಗಳು

10. ಹಲವರಿಗೆ ಬೆಕ್ಕು ಅಡ್ಡ ಹೋಗುವುದು _________. 1

(A) ಒಳ್ಳೆಯದು (B) ಅಶುಭ
(C) ನಿಷೇಧ (D) ರೂಢಿ

11. ಜಲವೆ ಸಕಲಕುಲಕೆ–ತಾಯಲ್ಲವೆ ಎಂದು ಇವರು ಹೇಳಿದರು : 1

(A) ಪುರಂದರದಾಸರು (B) ಬಸವಣ್ಣ
(C) ಅಕ್ಕಮಹಾದೇವಿ (D) ಕನಕದಾಸರು

12. ಕೆಳಗೆ ಕೊಟ್ಟ ಗದ್ಯಭಾಗವನ್ನು ಓದಿಕೊಂಡು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿರಿ :

ವಿದ್ಯೆ ಇರಲಿ, ಬುದ್ಧಿ ಇರಲಿ, ದ್ರವ್ಯವಿರಲಿ ಅದು ಏನಿದ್ದರೂ ಸಂಪತ್ತೇ ಸರಿ. ಆ ಸಂಪತ್ತು ತನಗಾಗಲೆಂದೂ, ತನ್ನದಾಗಲೆಂದೂ ಮನುಷ್ಯನು ಆಶಿಸುವುದು ಸ್ವಾಭಾವಿಕ; ಅದು ತಪ್ಪು ಅಲ್ಲ. ಆದರೆ ಅದರ ಒಲವು ತಪ್ಪಾಗಿರಬಹುದು. ಬಚ್ಚಿಟ್ಟಿದ್ದೆಲ್ಲವೂ ತನಗಾಗುವುದಿಲ್ಲವೆಂದೂ, ಅಂತೆಯೇ ಅದು ತನ್ನದಲ್ಲವೆಂದೂ ಯಾರಿಗಾದರೂ ತಿಳಿಯುತ್ತದೆ. ಆದುದರಿಂದ “ಬಚ್ಚಿಟ್ಟಿದ್ದು ಪರರಿಗೆ” ಎನ್ನುವುದು ಸ್ಪಷ್ಟ. ಈ ಮಾತು ಬಹುಜನರಿಗೆ ಅನುಭವಕ್ಕೆ ಬಂದಿರುವುದು. ಆದರೆ ಕೊಟ್ಟಿದ್ದು ತನಗೆಂಬ ಮಾತನ್ನು ಮನಗಾಣಿಸುವುದು ಕಠಿಣ; ಅದನ್ನು ಬುದ್ಧಿಗೊಪ್ಪಿಸುವಂತೆ ವಿವರಿಸುವುದು ಸುಲಭವಲ್ಲ. “ಕಲ್ಲಕ್ಕ ಕಡುಬು ಕೊಟ್ಟರೆ, ದ್ಯಾಮಕ್ಕ ದೋಸೆ ಕೊಡುವಳು” ಎನ್ನುವ ಗಾದೆಯು ಕನ್ನಡಿಗರಿಗೆ ಹಳೆಯದಾಗಿದೆ. ಅದೊಂದೇ ಮಾತನ್ನು ಮನನ ಮಾಡಿದರೆ, “ಕೊಟ್ಟಿದ್ದು ತನಗೆ” ಎಂಬ ತಿಳಿವು ಹೃದಯದಲ್ಲಿ ಹೊಳೆಯುವುದು, ಬೆಳಗುವುದು.

ಕೊಡುಗೆಯ ನೀತಿಗೂ ಒಂದು ಎಲ್ಲೆ ಬೇಕು. ಕೊಟ್ಟಿದ್ದೆಲ್ಲ ತನಗಾಗುವದೆಂದು ಸಿಕ್ಕಾಪಟ್ಟೆ ಕೊಡುವದೆಂದರೆ, ಕಬ್ಬು ಸವಿಯೆಂದು ಬೇರು ಸಹಿತ ತಿಂದಹಾಗೆ. ಈಗ ಉತ್ತಮನಾದವನಿಗೆ ಕೊಡಬೇಕು ಎನ್ನುವ ಕಟ್ಟಳೆಯು ಸರ್ವೇಸಾಮಾನ್ಯವಾಗಿದೆ. ಎಲ್ಲದಕ್ಕೂ ಇತಿಮಿತಿ ಇರಲಿ.

**ಪ್ರಶ್ನೆಗಳು :**

(1) ಮನುಷ್ಯನು ಸಂಪತ್ತು ತನ್ನದಾಗಲೆಂದು ಆಶಿಸುವುದು _________. 1

(A) ಆಕಸ್ಮಿಕ (B) ಸ್ವಾಭಾವಿಕ
(C) ಕ್ರಿಯಾತ್ಮಕ (D) ಸೃಜನಾತ್ಮಕ

(2) ಸಂಪತ್ತಿನ ಮೇಲೆ ಒಲವು _________. 1

(A) ತಪ್ಪಾಗಿರಬಹುದು (B) ಸರಿಯಾಗಿರಬಹುದು

(C) ಶುದ್ಧವಾಗಿರಬಹುದು (D) ತಪ್ಪಲ್ಲದಿರಬಹುದು

(3) ಯಾವುದು ಸ್ಪಷ್ಟವಾದುದು ? 1

(4) ಯಾವುದು ಕಠಿಣ ? ಯಾವುದು ಸುಲಭವಲ್ಲ ? 2

(5) ಯಾವ ಗಾದೆಮಾತು ಕನ್ನಡಿಗರಿಗೆ ಹಳೆಯದು ? 2

(6) ಯಾವುದಕ್ಕೆ ಎಲ್ಲೆ ಬೇಕು ? 1

(7) "ಕೊಟ್ಟಿದ್ದು ತನಗೆ" ಎಂಬ ತಿಳಿವು ಹೃದಯದಲ್ಲಿ ಯಾವಾಗ ಬೆಳಗುವದು ? 2

(8) ಯಾವುದು ಬೇರುಸಹಿತ ತಿಂದ ಹಾಗೆ ? 2

(9) ಯಾವುದು ಸರ್ವೇಸಾಮಾನ್ಯವಾಗಿದೆ ? 1

**13.** ಕೊಟ್ಟಿರುವ ಪದ್ಯಭಾಗವನ್ನು ಓದಿರಿ, ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿರಿ :

ಹಾಡು ಹೇಳಲು ಏಕೆ ಶಬ್ದಾಲಂಕಾರ
ಹಾಡುವುದೆ ಹಕ್ಕಿ ರಾಗ ಪ್ರಸ್ತಾರದನುಸಾರ ?
ಭಾವಕೋಶವ ಒಡೆದು ಸ್ವರ ಹೊಮ್ಮಿದಾಗ
ಅದುವೆ ಹಾಡಾಗುವುದು ತನ್ನತನ್ನಂತೆ!
ಹಾಡು ಹೊಸೆಯಲಿಕೆಲ್ಲಿ ಗೊತ್ತಿತ್ತು ಹಿರಿಯರಿಗೆ–ಮಾತು
ಆಡುತ್ತ ಅರೆದರು ಕೇರಿದರು ಹೆಕ್ಕಿದರು–ಮೌನ
ತೇಯುತ್ತ ತೆತ್ತರು ಅತ್ತರು ಸಂಭ್ರಮಿಸಿದರು
ಹಾಡು ಕಟ್ಟುವ ಬದಲು ಭತ್ತ ಕುಟ್ಟಿದರು
ಹ್ಞಾಂ ಹ್ಞೂ ಹೈ ನಡುವೆ ವಿಜೃಂಭಿಸಿದರು
ಹಾಡಾಯಿತದುವೇ ಹೊದಲಿನಂತೆ

– ವೈದೇಹಿ

**ಪ್ರಶ್ನೆಗಳು :**

(1) ಪ್ರಸ್ತಾರದ ಅನುಸಾರ ಇದು ಹಾಡುವುದಿಲ್ಲ : 1

(A) ಸ್ವರ (B) ಅಲಂಕಾರ

(C) ಹಕ್ಕಿ (D) ಕೋಶ

(2) ಸ್ವರ ಹೊಮ್ಮಿದಾಗ – 1

ಸ್ವರ – ಇದರ ತದ್ಭವ ರೂಪ _________.

(3) ಹಾಡು ಕಟ್ಟುವ ಬದಲು ಭತ್ತ ಕುಟ್ಟಿದರು. 2

– ಕರ್ನಾಟಕದಲ್ಲಿ ಭತ್ತ ಬೆಳೆಯುವ ನಾಲ್ಕು ಜಿಲ್ಲೆಗಳ ಹೆಸರು ಬರೆಯಿರಿ.

(4) ಅರೆದರು – ಕೇರಿದರು – ಈ ಪದಗಳ ಅರ್ಥವ್ಯತ್ಯಾಸ ಬರೆಯಿರಿ. 2

**14.** ಗಾಂಧೀಜಿಗೆ ಸ್ತ್ರೀ ಪ್ರಪಂಚ ಅರ್ಥವಾದದ್ದು ಯಾರ ಮುಖಾಂತರ ? 1

**15.** ಬೆಳಗಿನ ಜಾವದಲ್ಲಿ ದೇವರನ್ನು ಎಬ್ಬಿಸಲು ಭಕ್ತಾದಿಗಳು ಏನು ಮಾಡುತ್ತಾರೆ ? 1

**16.** ಸರ್ವಜ್ಞನ ಊರು ಯಾವುದು ? 1

17. ಸಿದ್ದಲಿಂಗಯ್ಯ ಅವರು ಯಾವ ಊರಿನಲ್ಲಿ ಜನಿಸಿದರು ? 1

18. (A) ಹುಯೆನ್–ತ್ಸಾಂಗ್‌ನಿಗೆ ಯಾವ ಮತದಲ್ಲಿ ಆಸಕ್ತಿ ಮೂಡಿತು ? 1

(B) ರಾಜ, ದೊರೆ, ಅರಸ, ಸಚಿವ – ಇಲ್ಲಿ ಗುಂಪಿಗೆ ಸೇರದ ಪದ __________. 1

19. ಕೆಳಗಿನವುಗಳಿಗೆ ಉತ್ತರಿಸಿರಿ :

(A) ಇಲ್ಲಿರುವ ಪದಗಳಲ್ಲಿ ಯಾವುದಾದರೂ **ಎರಡನ್ನು** ಬಿಡಿಸಿ ಬರೆಯಿರಿ. 2

(1) ಕೈಹಿಡಿ

(2) ಆಮನೆ

(3) ದೇವಮನೆ

**ಅಥವಾ**

ಇಲ್ಲಿರುವ ಪದಗಳಲ್ಲಿ ಯಾವುದಾದರೂ **ಎರಡನ್ನು** ಕೂಡಿಸಿ ಬರೆಯಿರಿ.

(1) ಒಂದು + ಕಟ್ಟು

(2) ಇನಿದಾದ + ಸರ

(3) ತಂದೆಯೂ + ತಾಯಿಯೂ

(B) **'ವಂತ'** ಪ್ರತ್ಯಯ ಸೇರಿಸಿ ಎರಡು ಶಬ್ದಗಳನ್ನು ತಯಾರಿಸಿರಿ. 2

**ಅಥವಾ**

**'**ಅನ್ನು**'** ಪ್ರತ್ಯಯಕ್ಕೆ ಸಂಬಂಧಿಸಿದಂತೆ ಎರಡು ಶಬ್ದಗಳನ್ನು ಬರೆಯಿರಿ.

(C) ಕೆಳಗೆ ಕೊಟ್ಟಿರುವ ಪದಗಳಿಗೆ ವಿರುದ್ಧ ಪದ ಬರೆಯಿರಿ (ಎರಡಕ್ಕೆ) : 2

(1) ಅಗತ್ಯ

(2) ಅನುಕೂಲ

(3) ಭಯ

**ಅಥವಾ**

ಕೊಟ್ಟಿರುವ ವಾಕ್ಯಗಳಲ್ಲಿ ಗೆರೆ ಎಳೆದಿರುವ ಪದಕ್ಕೆ ಸಮಾನಾರ್ಥಕ ಪದ ಬರೆಯಿರಿ.

(1) ಗಾಂಧೀಜಿಯವರು ದೇಶಕ್ಕಾಗಿ <u>ದುಡಿದರು</u>.

(2) ಕುವೆಂಪು ಅವರು ಶಿವಮೊಗ್ಗ ಜಿಲ್ಲೆಯಲ್ಲಿ <u>ಜನಿಸಿದರು</u>.

20. ಕೆಳಗೆ ಕೊಟ್ಟಿರುವ ನುಡಿಗಟ್ಟುಗಳಲ್ಲಿ ಯಾವುದಾದರೂ **ಎರಡನ್ನು** ನಿಮ್ಮ ವಾಕ್ಯಗಳಲ್ಲಿ ಬರೆಯಿರಿ : 2

(1) ನಾಚಿಕೆಪಡು

(2) ರಾಮಬಾಣ

(3) ಕ್ರಿಯಾಶೀಲ

21. 'ಗುರೂಪದೇಶ' ಈ ಪದವು ಯಾವ ಸಂಧಿಯ ನಿಯಮದಲ್ಲಿ ಬರುತ್ತದೆ ? 1

22. ಕವಿಯ ಮನಸ್ಸು ಬನವಾಸಿಯನ್ನು ಹೇಗೆ ನೆನೆಯುತ್ತದೆ ? 4

23. ರಾವಣನ ಹೃದಯ ಪರಿವರ್ತನೆಯ ಸಂದರ್ಭವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. 5

24. ಮೈಲಿ ರೋಗದಿಂದ ಆಗುವ ದುಷ್ಪರಿಣಾಮಗಳಾವುವು ? 5

**ಅಥವಾ**

ಕೊಕ್ಕರೆಗಳು ಮೀನು ಹಿಡಿಯುವ ದೃಶ್ಯ ಕವಿಗೆ ಹೇಗೆ ಆಶ್ಚರ್ಯ ಮೂಡಿಸಿತು ?

25. ಕೊಟ್ಟಿರುವ ಪದಗಳಲ್ಲಿ ಯಾವುದಾದರೂ **ಎರಡಕ್ಕೆ** ಎರಡು ಶಬ್ದಗಳನ್ನು ಬಳಸಿಕೊಂಡು ಅರ್ಥಪೂರ್ಣವಾದ ವಾಕ್ಯಗಳನ್ನಾಗಿ ಮಾಡಿರಿ : **2+2=4**

(A) ಅರಸು/ಹರಸು

(B) ಬಲ/ಅಬಲ

(C) ಸುರಿಸು/ಸರಿಸು

26. ಶಂಕ್ರಪ್ಪ ಸಕ್ರಿ ಮಾಧ್ಯಮಿಕ ಶಾಲೆ ಬಾಗಲಕೋಟೆ, ಇಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡಲು ದಾಖಲಾದ ವಿದ್ಯಾರ್ಥಿಗಳ ಬೆಳವಣಿಗೆ ಸಂಖ್ಯೆಯನ್ನು ಕೊಡಲಾಗಿದೆ. ಅದರ ಸಹಾಯದಿಂದ ಏಕರೇಖಾ ಚಿತ್ರವನ್ನು ರಚಿಸಿರಿ : 5

| ವರ್ಷ | 1994 | 1994 | 1995 | 1995 | 1996 | 1996 | 1997 | 1997 | 1998 | 1998 | 1999 | 1999 |
|---|---|---|---|---|---|---|---|---|---|---|---|---|
| ತಿಂಗಳು | ಜೂನ್ | ಅಕ್ಟೋಬರ್ | ಜೂನ್ | ಅಕ್ಟೋಬರ್ | ಜೂನ್ | ಅಕ್ಟೋಬರ್ | ಜೂನ್ | ಅಕ್ಟೋಬರ್ | ಜೂನ್ | ಅಕ್ಟೋಬರ್ | ಜೂನ್ | ಅಕ್ಟೋಬರ್ |
| ದಾಖಲಾದ ಒಟ್ಟು ವಿದ್ಯಾರ್ಥಿಗಳು | 2000 | 2010 | 2050 | 2100 | 3210 | 3260 | 4300 | 5450 | 5650 | 7800 | 8940 | 9115 |

**ಅಥವಾ**

ನೀವು ಭೀಮನಗೌಡ, ತಂದೆ ರುದ್ರಗೌಡ, ಊರು ಬಿಜಾಪುರ, ಬಿ.ಎಸ್‌ಸಿ. ಪದವೀಧರರು ಎಂದು ಭಾವಿಸಿ, ಉದ್ಯೋಗಕ್ಕಾಗಿ ಕೆಳಗಿನ ಅರ್ಜಿಯನ್ನು ಭರ್ತಿ ಮಾಡಿರಿ :

ಗೆ,

ಶಾಖಾಧಿಕಾರಿಗಳು

ಜೀವ ವಿಮಾ ನಿಗಮ

ಚಾಮರಾಜನಗರ

ಉದ್ಯೋಗದ ಹೆಸರು – ಹೈಯರ್ ಗ್ರೇಡ್ ಅಸಿಸ್ಟಂಟ್

ಪ್ರ. ನಂ. ದಿ. ಆರ್. ಡಿ. 7/95-96

ದಿನಾಂಕ – 17-6-2014

ಹೆಸರು :

ತಂದೆ :

ಜನ್ಮಸ್ಥಳ :

ಹುಟ್ಟಿದ ದಿನಾಂಕ :

ಪೂರ್ಣ ವಿಳಾಸ :

ರಾಷ್ಟ್ರೀಯತೆ :

ಮತ/ಜಾತಿ :

ವಿದ್ಯಾರ್ಹತೆ :

ಅನುಭವ :

ಓದಿದ ಶಾಲೆಯಿಂದ ದೃಢೀಕರಣ ಪತ್ರ :

ಬ್ಯಾಂಕ್/ಅಂಚೇಕಛೇರಿ ಹೆಸರು :

ಖರೀದಿಸಿದ ಡಿ.ಡಿ./ಪಿ.ಓ.ನಂ. :

ಮೇಲ್ಕಂಡ ವಿಷಯಗಳಿಗೆ ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ಲಗತ್ತಿಸಿದೆ. ನಾನು ಸಲ್ಲಿಸುತ್ತಿರುವ ಅರ್ಜಿಯಲ್ಲಿನ ಎಲ್ಲಾ ವಿಚಾರಗಳು ಸತ್ಯವಾಗಿವೆ ಎಂದು ಪ್ರಮಾಣೀಕರಿಸುತ್ತೇನೆ.

ಉದ್ಯೋಗಾಕಾಂಕ್ಷಿಯ ಹಸ್ತಾಕ್ಷರ

(ಹೆಸರು)

27. ವೈದ್ಯಕೀಯ ಪದ್ಧತಿಯನ್ನು ಬದಲಿಸುವ ಕುರಿತು ಹಾಗೂ ಔಷಧಿ ಕೊಂಡುಕೊಳ್ಳುವಾಗ ಯಾವ ರೀತಿ ಜಾಗರೂಕರಾಗಿರಬೇಕು ? **5**

28. ಈ ವಾಕ್ಯಗಳನ್ನು ಓದಿ, ನಿರ್ದೇಶನದಂತೆ – ಉತ್ತರಿಸಿರಿ : **1x5=5**

(1) ರಾಹುಲಿ ದ್ರವೀಡ ಒಬ ಕ್ರಿಕೆಟ್ ಆಟಗರ.
(ಶುದ್ಧ ರೂಪದಲ್ಲಿ ಬರೆಯಿರಿ)

(2) ವಿದ್ಯಾವಂತ ಮಕ್ಕಳೇ ನಮ್ಮ ದೇಶದ ಆಸ್ತಿ ಃ ನಮ್ಮ ಈ ಪದದ ಏಕವಚನರೂಪ __________.

(3) ಆಟ–ಪಾಠ : ಜೋಡಿಪದ : : ಊರೂರು : __________.

(4) ರಾಮಾ ಎಲ್ಲಿಗೆ ಹೋಗಿದ್ದೆ ಎಂದು ಗುರುಗಳು ಪ್ರಶ್ನಿಸಿದರು __________.
(ಇಲ್ಲಿ ಇರಬೇಕಾದ ಲೇಖನ ಚಿಹ್ನೆ)

(5) ಗೀತಾ ಬೇಗಬೇಗ ಶಾಲೆಗೆ ಬಂದಳು.
(ಇದನ್ನು ಭವಿಷತ್ ಕಾಲಕ್ಕೆ ಪರಿವರ್ತಿಸಿ)

29. ನೀವು ಶ್ಯಾಮಸುಂದರ/ಲಾವಣ್ಯ ಬೀದರ ಜಿಲ್ಲೆ ಬಸವಕಲ್ಯಾಣದವರು, ಎಂದು ಭಾವಿಸಿ ನಿಮ್ಮ ಪ್ರದೇಶದಲ್ಲಿ ಕುಡಿಯುವ ನೀರಿನ ಅಭಾವವನ್ನು ನಿವಾರಿಸುವಂತೆ ಕೋರಿ ಆಯುಕ್ತರು, ಜಲಮಂಡಳಿ ವಿಭಾಗ ಬೆಂಗಳೂರು, ಇವರಿಗೆ ಒಂದು ಪತ್ರ ಬರೆಯಿರಿ. **7**

**ಅಥವಾ**

ಕೀರ್ತಿ/ಕೀರ್ತನಾ, ಕುವೆಂಪುನಗರ ಮೈಸೂರು ಎಂದು ತಿಳಿದು, ಜಯನಗರ ಬೆಂಗಳೂರಿನಲ್ಲಿರುವ ಆನಂದ/ ರಮ್ಯಾ ನಿಮ್ಮ ಗೆಳೆಯ/ಗೆಳತಿಗೆ ನಿಮ್ಮ ವಿದ್ಯಾಲಯದಲ್ಲಿ ಆಚರಿಸಿದ ವಾರ್ಷಿಕ ಕ್ರೀಡಾಕೂಟವನ್ನು ವಿವರಿಸುತ್ತಾ ಒಂದು ಪತ್ರ ಬರೆಯಿರಿ.

30. ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೂ **ಒಂದನ್ನು** ಕುರಿತು 50 ಶಬ್ದಗಳಿಗೆ ಮೀರದಂತೆ ಬರೆಯಿರಿ : **5**

(1) ಮನಸ್ಸಿದ್ದರೆ ಮಾರ್ಗ.

(2) ಗಾಳಿ ಬಂದಾಗ ತೂರಿಕೋ.

(3) ಮಿಂಚಿ ಹೋದ ಮಾತಿಗೆ ಚಿಂತಿಸಿ ಫಲವಿಲ್ಲ.

31. ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ **ಒಂದನ್ನು** ಕುರಿತು 200 ಶಬ್ದಗಳಿಗೆ ಮೀರದಂತೆ ಪ್ರಬಂಧವನ್ನು ಬರೆಯಿರಿ : **10**

(1) ಸಂಪರ್ಕ ಮಾಧ್ಯಮಗಳು

(2) ಔಷಧೀಯ ಸಸ್ಯಗಳು

(3) ನನ್ನ ಕನಸಿನ ಭಾರತ

- o O o -